ಸೂರಿಗೆ ಕೋಪ ತಡೆಯಲಾಗಲಿಲ್ಲ. "ಅವರು ಅಂತವರಲ್ಲ. ಒಳ್ಳೆಯ ವ್ಯಕ್ತಿ. ಇಲ್ಲಸಲ್ಲದ್ದನ್ನೆಲ್ಲ ಹೇಳಬೇಡಿ. ನಿಮಗೆ ಇದನ್ನೆಲ್ಲ ಯಾರು ಹೇಳಿದ್ದು?" ಎಂದ.

"ಹೇಳಿದವರು ಯಾರೇ ಇರಲಿ, ಬೆಂಕಿ ಇಲ್ಲದೆ ಹೊಗೆ ಹಾರುವುದಿಲ್ಲ ತಿಳಿಯಿತಾ..." ಎನ್ನುತ್ತ ಅಲ್ಲಿಂದ ನುಣುಚಿಕೊಂಡರು.

ಸೂರಿಗೆ ಈಗ ತಲೆ ಕೆಟ್ಟಿತು. ಸೂರ್ಯತೇಜರಷ್ಟು ಒಳ್ಳೆಯ ವ್ಯಕ್ತಿಯನ್ನು ಇಂದಿಗೂ ನಾನು ನೋಡಿಲ್ಲ. ಆದರೆ ಅವರ ಬಗ್ಗೆ ಈ ತೆರನ ಅಪವಾದ ಹಾಕಿದ್ದಾನಲ್ಲ. 'ಈ ಸಂಶಯವನ್ನು ಯಾರಲ್ಲಿ ಕೇಳಿ ಪರಿಹರಿಸಿಕೊಳ್ಳಲಿ? ಸುಮ್ಮನೆ ಎಲ್ಲರ ಬಳಿ ಕೇಳುತ್ತ ಹೋದರೆ ನಾನೂ ಅದೇ ಅಪವಾದವನ್ನು ಬಿತ್ತರಿಸಿದಂತಾಗುವುದಿಲ್ಲವೇ? ನನಗೆ ಜೀವನದ ದಾರಿ ತೋರಿದ ಗುರು ಅವರು. ಅವರನ್ನು ಹೇಗೆ ಹೀಗೆಲ್ಲ ಅಂದು ಕೊಳ್ಳಲಿ. ನೇರವಾಗಿಯೇ ಅವರ ಬಳಿಯೇ ಕೇಳಿಬಿಡಲೇ? ನನ್ನ ಬಗ್ಗೆ ತಪ್ಪು ತಿಳಿದುಕೊಂಡು ಕೋಪಗೊಂಡರೆ...' ಎಂಬ ಪ್ರಶ್ನೆಗಳು ಸೂರಿಯನ್ನು ಕಾಡಲಾರಂಭಿಸಿದವು.

ಸಂಜೆ ಸೂರ್ಯತೇಜರು ಒಬ್ಬರೇ ಏನನ್ನೋ ಯೋಚಿಸುತ್ತ ಕುಳಿತಿದ್ದರು. ಸೂರಿಯನ್ನು ಕಂಡವರೇ ಹತ್ತಿರ ಬಾ ಎಂದು ಕರೆದರು.

"ಸೂರಿ, ನಿನಗೊಂದು ಸಣ್ಣ ಪಾತ್ರಕೊಡುತ್ತೇನೆ, ಅಭಿನಯಿಸಬೇಕು ಆಯಿತಾ?"

"ನನಗೂ ಆಸೆಯಿದೆ. ನೀವು ಕಲಿಸಿಕೊಟ್ಟರೆ ಖಂಡಿತ."

"ನಾನು ಹೇಳಿಕೊಡುತ್ತೇನೆ."

"ಸರ್..." ಎನ್ನುತ್ತ ಪ್ರಶ್ನಾರ್ಥಕವಾಗಿ ನೋಡಿದ.

"ಏನು? ನಿನ್ನಿಂದ ಸಾಧ್ಯವಿದೆ. ನಾನಿರುವಾಗ ಚಿಂತೆ ಮಾಡಬೇಡ."

"ಅದಲ್ಲ, ನಿಮ್ಮ ಬಗ್ಗೆ ಏನೋ ಕೇಳಲಿಕ್ಕಿದೆ. ಆದರೆ ನೀವು ತಪ್ಪು ತಿಳಿಯಬಾರದು."

"ಇಲ್ಲ, ನೀ ನನ್ನ ದತ್ತುಪುತ್ರ. ಏನು ಬೇಕಾದರೂ ಕೇಳು. ಉತ್ತರವಿದ್ದರೆ ಖಂಡಿತ ಸರಿಯಾಗಿಯೇ ಉತ್ತರಿಸುತ್ತೇನೆ."

ಸೂರಿಗೆ ಈಗ ಸ್ವಲ್ಪ ಧೈರ್ಯ ಬಂತು. "ಸರ್, ನೀವ್ಯಾಕೆ ಊರು ಬಿಟ್ಟು ಬಂದಿದ್ದು?"

"ನಾನು ನೆಮ್ಮದಿಯನ್ನು ಹುಡುಕುತ್ತ ಬಂದೆ. ಮನಸ್ಸು ತುಂಬಾ ತಲ್ಲಣದಲ್ಲಿತ್ತು. ಯಾವುದೂ ಬೇಡವೆಂಬ ನಿರ್ಲಿಪ್ತ ಭಾವವನ್ನು ತಾಳುತ್ತಿತ್ತು. ನಾಟಕದಲ್ಲಿ ಆಸಕ್ತಿಯಿತ್ತು. ಆ ಊರಿನ ಬಗ್ಗೆ ಬೇಸರವೂ ಇತ್ತು. ಮನಸ್ಸಿನ ಆನಂದವನ್ನು ಅರಸಿ ಇಲ್ಲಿಗೆ ಬಂದುಬಿಟ್ಟೆ. ಉಳಿದುಬಿಟ್ಟೆ."

ಸೂರಿಗೆ ಅವರ ಮಾತು ಸ್ಪಷ್ಟತೆ ಇದ್ದಂತೆ ಅನಿಸದೆ ಒಗಟಾಗಿ ಕಂಡಿತು. ಆದರೂ ಅರ್ಥವಾದಂತೆ ತಲೆಯಾಡಿಸುತ್ತ "ಸರ್, ನಿಮ್ಮ ಮನೆಯಲ್ಲಿ ನೀವೊಬ್ಬರೇ ಇದ್ದೀರಂತೆ ಹೌದಾ? ನಿಮ್ಮ ಹೆಂಡತಿ ಎಲ್ಲಿದ್ದಾರೆ?" ಎಂದ.

ಹದಿನೈದು ವರ್ಷಗಳಲ್ಲಿ ಯಾರೂ ಕೇಳಿರದ ಪ್ರಶ್ನೆಯನ್ನು ಸೂರಿ ಕೇಳಿಬಿಟ್ಟಿದ್ದ. ಸೂರ್ಯತೇಜರು ಒಂದಲ್ಲ ಒಂದು ದಿನ ಈ ಪ್ರಶ್ನೆ ಬಂದೀತೆಂಬುದನ್ನು ಮೊದಲೇ ಊಹಿಸಿದ್ದರು. ಮದುವೆಯಾಗದ ಅಥವಾ ಹೆಂಡತಿಯಿರದ ಗಂಡನ್ನು ಸಮಾಜ ಇವತ್ತಿಗೂ ಆಡಿಕೊಳ್ಳುವುದರಲ್ಲಿ ಹಿಂದಿಲ್ಲ ಎಂಬುದು ಸಾರ್ವಕಾಲಿಕ ಸತ್ಯ ಎಂಬುದನ್ನು ಅರಿತಿದ್ದರು. ಸೂರಿಗೆ ನನ್ನ ಮೇಲೆ ಸಂಶಯವಿರಬಾರದೆಂಬ ಕಾರಣಕ್ಕೆ ಮತ್ತು ತುಂಬಾ ಆತ್ಮೀಯ ಎಂಬ ಕಾರಣಕ್ಕೆ ಹೇಳಲು ಇಷ್ಟವಿರದ ಸಂಗತಿಯನ್ನು ಹೇಳಿದರು.

"ಅವಳು ಪರದೇಶದಲ್ಲಿದ್ದಾಳೆ. ಎಲ್ಲವೂ ಬದುಕಿನ ಅನಿವಾರ್ಯತೆ. ದೇವರು ಕೊಟ್ಟಿದ್ದನ್ನು ಬದಲಾಯಿಸಲಾಗದು. ವರ್ಷಕ್ಕೊಮ್ಮೆ ಬರುತ್ತಾಳೆ. ಮಕ್ಕಳು ಬೇಕೆಂಬ ಆಸೆ ಸಹಜವಾಗಿಯೇ ಇತ್ತು. ನೆರವೇರಲಿಲ್ಲ. ಇನ್ನು ನೆರವೇರುವುದೂ ಇಲ್ಲ. ನಿನ್ನನ್ನೇ ತೆಗೆದುಕೋ. ನಿನ್ನ ಪ್ರಕಾರ ನೀನು ಹೋಟೆಲ್ ಮಾಣಿಯಾಗಿರಬೇಕಿತ್ತು. ಆದರೆ ಈಗ ಕಲಾವಿದನಾಗುವುದರಲ್ಲಿದ್ದೀಯ" ಎಂದು ಸುಮ್ಮನಾದರು.